ಹುಟ್ಟಿದ್ದು ಕುಂದಾಪುರದ ಗ್ರಾಮೀಣ ಹಳ್ಳಿಯಾದರೂ ಓದಿನ ಗೀಳು ಅಂಟಿಸಿಕೊಂಡು ಜಗತ್ತಿನ ಆಗುಹೋಗುಗಳನ್ನು ಗಮನಿಸುತ್ತ ಬಂದವರು ಮೀನಾಕ್ಷಿ ಹೆಂಗವಳ್ಳಿ. ಹುಟ್ಟೂರ ಹೆಸರನ್ನು ತಮ್ಮೊಡನೆಯೇ ಹೊತ್ತು ಕರ್ನಾಟಕದ ವಿವಿಧ ಊರುಗಳಲ್ಲಿ ವಾಸಿಸುವ ಅವಕಾಶ ಪಡೆದವರು. ಕಥೆ, ಪ್ರಬಂಧ, ಲೇಖನಗಳನ್ನು ಬರೆಯುತ್ತಾ ಸಾಹಿತ್ಯ ಲೋಕದ ಸಂಪರ್ಕವಿಟ್ಟುಕೊಂಡವರು. ಪ್ರಸ್ತುತ ಮೈಸೂರಿನ ಶ್ರೀರಾಂಪುರ ನಿವಾಸಿ.

ಸೇರಿಕೊಂಡಿದ್ದಳು. 'ಹಂಗಾಸ್ ತಿರ್ಗಿ ಅಜ್ಜಿ, ಹಿಂಗಾಸ್ ಮಗ್ಲಾಗಿ ಅಜ್ಜಿ' ಅಂತೆಲ್ಲ ಅವಳು ಹೇಳುತ್ತಿದ್ದರೆ ನಾನದನ್ನು ಮೊದಲು ಅರ್ಥಮಾಡಿಕೊಂಡು ನಂತರ ನಮ್ಮತ್ತೆಗೆ ಪಾಠ ಒಪ್ಪಿಸಬೇಕಿತ್ತು.

ಆಮೇಲಿನ ಸರದಿ ಪುತ್ತೂರಿನ ಮೂವತ್ತರ ತರುಣಿ ಮೇರಿಯದು. ಹೆಚ್ಚು ಕಡಿಮೆ ಅನಾಥಪಕ್ಷಿ. ಅವಳ ಜೀವನದ ಏಕೈಕ ಉದ್ದೇಶವೆಂದರೆ ಅಪ್ಪ, ಅಮ್ಮ ಇಲ್ಲದ ತನ್ನ ತಂಗಿಗೆ ಒಳ್ಳೆಯ ವಿದ್ಯೆ ಕೊಡಿಸುವುದು. ತಕ್ಕಮಟ್ಟಿಗೆ ವಿದ್ಯಾವಂತೆಯೂ ಲಕ್ಷಣವಂತೆಯೂ ಆಗಿದ್ದ ಈಕೆಯನ್ನು ನೀನ್ಯಾಕಿನ್ನೂ ಮದುವೆಯಾಗಿಲ್ಲ ಅಂತ ಕೇಳಿದರೆ 'ಆಪ್ಣೆ ಏಕ್ದಂ ಸಾವ್ಳೆಂ. ಲಗ್ನಾ ಕುಶಿನ್ ಮಾಲ್ವೊಂಕ್ ಆಯ್ಕಾಲೆಂನಾ' ಕೊಂಕಣಿಯಲ್ಲಿ ಹೇಳಿ ಆಮೇಲದನ್ನು ಕನ್ನಡೀಕರಿಸಿದ್ದಲ್ಲದೇ ತನ್ನ ಕಪ್ಪು ಬಣ್ಣದಿಂದಾಗಿ ಹಲವರು ವರದಕ್ಷಿಣೆ ಕೇಳಿದ್ದರಿಂದ ತಾನು ಲಗ್ನವಾಗಲು ನಿರಾಕರಿಸಿದ್ದಾಗಿ ಹೇಳಿದಳು. ಕೊಂಕಣಿ ಮಾತೃಭಾಷೆಯಾದ ಈಕೆಗೆ ಕನ್ನಡ ತುಳು ಕೊಡವ ಭಾಷೆಯ ಜೊತೆಗೆ ಇಂಗ್ಲಿಷ್ ಕೂಡಾ ಬರುತ್ತಿತ್ತು. ಕೆಲವೊಮ್ಮೆ ತನ್ನೂರಿನ ಪರಿಚಯದವರ ಜೊತೆ ಫೋನಲ್ಲಿ ಮಾತಾಡುತ್ತಾ 'ಎಂಚಾ ಉಲ್ಲರ್? ವಣಸ್ ಆಂಡಾ?' ಅಂತೆಲ್ಲ ತುಳುವಿನಲ್ಲಿ ಗುಂಯ್ಗುಡುತ್ತಿದ್ದಳು.

ಮೇರಿ ಕ್ರಿಸ್ಮಸ್‌ಗೆಂದು ಊರಿಗೆ ಹೋದಾಗ ಬದಲಿಗೆ ಬಂದವಳು ಇನ್ನೂ ಹತ್ತೊಂಬತ್ತರ ಹರೆಯದ ಮಂಡ್ಯದ ಕಡೆಯ ಸಹನಾ. ಆಗಷ್ಟೇ ಈ ಕೆಲಸಕ್ಕೆ ಸೇರಿಕೊಂಡಿದ್ದಳು. ಮೊದಮೊದಲು ನಮ್ಮತ್ತೆ ಜೊತೆ ಏಗಲಾರದೆ ಬಂದ ಒಂದು ವಾರಕ್ಕೇ 'ಒತಾರೆಯಿಂದ ಅವ್ವನ್ ಫೋನ್ ಬತ್ತಾ ಅದೆ. ನಾ ಊರಿಗೋಯ್ತೀನಿ' ಅಂತೆಲ್ಲ ವರಾತ ತೆಗೆದವಳು ಆಮೇಲಾಮೇಲೆ 'ದೇವ್ರ ಸತ್ಯವಾಗ್ಲೂ ಸುಳ್ ಯೋಳ್ತಿ್ರ ನನ್ ನಾಲ್ಗಗ ಉಳಾ ಬೀಳ್ಲಿ' ಅಂತ ಪ್ರಮಾಣ ಮಾಡುತ್ತಾ ಬೇರೆ ಕಡೆ ಹೋದ್ರೆ ಜಾತಿಭೇದ ಮಾಡುವುದಲ್ಲದೇ ಮನೆಗೆಲಸವನ್ನೆಲ್ಲ ತನ್ನ ಕೈಲೇ ಬಿಟ್ಟಿ ಮಾಡಿಸಿಕೊಂಡು ಹೊಟ್ಟೆ ತುಂಬಾ ಊಟಾನೂ ಕೊಡದೆ ಸತಾಯಿಸುವವರ ಮನೆ ಪುನಃ ಸಿಕ್ಕರೆ ಅನ್ನುವ ಭಯದಿಂದ 'ನಾನಿಲ್ಲೇ ಇರಾಕಿ' ಅಂತ ಪಟ್ಟು ಹಿಡಿದವಳು. ಆದರೆ ಡೈಪರ್, ಆಕ್ಸಿಜನ್ ಪೈಪ್, ಬೈಪಾಪ್ ಮಿಶನ್ ಇತ್ಯಾದಿ ಶುಶ್ರೂಷೆಗಳಲ್ಲಿ ಅವಳಿಗಿರುವ ಅನುಭವದ ಕೊರತೆಯಿಂದ ನಾವೇ ಅವಳನ್ನು ಬದಲಾಯಿಸಿದ್ದಾಯಿತು. ನಂತರದ ಸರದಿ ಧಾರವಾಡದ ಭವಾನಿಯದು. 'ಮ್ಯಾಟ್ರಿಕ್ ಮುಗದು ಒಂದ್ವರಷ ನಾ ನಮ್ಮೂರಾಗ ಉಳಿಯೂ ಹಂಗ ಆತ್ರಿ. ಆವಾಗ ನಮ್ಮವ್ವ ನನ್ ಮದಿವಿ ಮಾತ್ ಹೂಡ್ಕೆಂಡು ತನ್ ತಮ್ಮಗ ನನ್ ಕೊಡತನ ಅಂದ್ಲೂರಿ. ಅಂವನ್ನ ನೋಡಿದ್ರ ಬರೀ ಯೋಳನೇತ್ತಾ ಮುಗ್ಸಿ ಒಕ್ಕಲತನಾ ಮಾಡಿಕೊಂತ ಹಳ್ಳಾಗ ಕುಂತಾನ್ರಿ. ಅದ್ಕೇ ನಾ ಈ ಕಡಿ ಬಂದೀನ್ರಿ' ಅಪ್ಪನನ್ನು ಕಳಕೊಂಡ ಈಕೆ ತವರಿನ ಸಂಬಂಧ ಬೆಸೆಯಬೇಕೆನ್ನುವ ಅವ್ವನ ಹಿಡಿತದಿಂದ ತಪ್ಪಿಸಿಕೊಂಡು ತನ್ನತನ ಹುಡುಕುತ್ತಾ ಬಂದು ಏಜೆನ್ಸಿಗೆ ಸೇರಿ ಅದಾಗಲೇ ನಾಲ್ಕು ವರ್ಷ ಕಳೆದಿತ್ತು. 'ಅಜ್ಜೀ, ಚಾ ಆರ್ತೈತಿ ಏಳ್ರೀ. ಮೂರುಚಂಜೀ ಮುಂದ ಮಕ್ಕೋಬಾರ್ದಂತ ನಿಮ್ಮಂಥ ಹಿರೇರು ಹೇಳ್ತಾರ್ರಿ' ಅನ್ನುತ್ತ ನಮ್ಮತ್ತೆಯನ್ನು ಮೇಲೇಳಲು ಹುರಿದುಂಬಿಸುತ್ತಿದ್ದಳು.

ಇಂತಿಪ್ಪ ಭವಾನಿಗೆ ಆಸ್ಪತ್ರೆಯೊಂದರಲ್ಲಿ ಕೆಲಸ ಸಿಕ್ಕಿ ಆಕೆ ಹೊರಟು ಹೋದಾಗ ನಮ್ಮಲ್ಲಿಗೆ ಬಂದವಳು ಚಂದ್ರಕಲಾ. 'ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ' ಎಂದು ಪಂಜೆಯವರು ವರ್ಣಿಸಿದ ಸ್ವರ್ಗೀಯ ಸೀಮೆ ಕೊಡಗಿನ ಚಂದ್ರಕಲಾ. ಆದರೆ 2018ರ ಹುಚ್ಚುಮಳೆಗೆ ಇವರ ಜಮೀನು ಮನೆಯೆಲ್ಲಾ ಭೂಕುಸಿತದಲ್ಲಿ ಕೊಚ್ಚಿಹೋಗಿ ಭೂರಮೆ ಭೀಭತ್ಸ ಅವತಾರ ತಳೆದಾಗ ಅನೇಕರಂತೆ ಇವರ ಕುಟುಂಬವೂ ಅತಂತ್ರವಾಗಿ ಪರಿಹಾರ ಇನ್ನೂ ಮರೀಚಿಕೆಯಾಗಿತ್ತು. ದೊಡ್ಡಮಗ ಬೆಂಗಳೂರಲ್ಲಿ ಹಾಸ್ಟೆಲಲ್ಲಿದ್ದುಕೊಂಡು ಇಂಜಿನಿಯರಿಂಗ್ ಓದುತ್ತಿದ್ದ. ಲಾರಿ ಡ್ರೈವರ್